## ತಲೆನೋವಿಗೆ ಸಾಕ್ಷಿ

ಧಾರಾಕಾರವಾಗಿ ಹರಿದು ಬರುತ್ತಿರುವ 'ಅಗ್ನಿಸಾಕ್ಷಿ' ತಲೆನೋವಿನ ಮಾತ್ರೆ ವ್ಯಾಪಾರಿಗಳಿಗೆ ಇನ್ನಿಲ್ಲದ ಶುಕ್ರದೆಶೆ. ಮೊದಲಿನಿಂದಲೂ ನೋಡಿಕೊಂಡು ಬರುತ್ತಿರುವ ಪಾಪದ ವೀಕ್ಷಕರು ಅಡಕತ್ತರಿಯಲ್ಲಿ ಸಿಕ್ಕ ಅಡಕೆಯಂತಾಗಿದ್ದಾರೆ. 'ಇತ್ತ ದರಿ ಅತ್ತ ಪುಲಿ' ಸ್ಥಿತಿ. ಕಥೆಯನ್ನು ಅದ್ಭುತವಾಗಿ ಎಳೆಯುತ್ತಿರುವ ಕಥೆಗಾರ ಇಷ್ಟು ವರ್ಷವಾದರೂ ಬೇಸರಿಸದೇ ಚರ್ವಿತ ಚರ್ವಣ ನಿರ್ದೇಶಿಸುತ್ತ ಆಡಿಸುತ್ತಿರುವ ಸೂತ್ರಧಾರ 'ಹಾಡಿದ್ದೇ ಹಾಡೋ ಕಿಸ್ಬಾಯಿ ದಾಸ' ರೀತಿಯ ನಟನೆಯ ಪಾತ್ರಧಾರಿಗಳು, ಬೈದುಕೊಳ್ಳುತ್ತಲೇ ಅಂತ್ಯವನ್ನು ಚಾತಕಪಕ್ಷಿಯಂತೆ ಕಾಯುತ್ತಿರುವ ವೀಕ್ಷಕ ಬಾಂಧವರೆಲ್ಲರ ಅತ್ಯದ್ಭುತ ಸಹನೆಗೆ ನನ್ನ ಅನಂತಾನಂತ ವಂದನೆಗಳು !

—ಲತಾ ಹೆಗಡೆ ಲಂಡನ್



## ಒಡೆದ ಕನ್ನಡಿ

ಕಲರ್ಸ್ ಕನ್ನಡದ 'ಮಿಥುನ ರಾಶಿ'ಯಲ್ಲಿ ಮಿಥುನ ಹಾಗೂ ರಾಶಿಯ ವಿವಾಹವಾಗಿ ಗಂಡನ ಮನೆಯಲ್ಲಿದ್ದರೂ ವೈವಾಹಿಕ ಜೀವನ ಸುಗಮವಾಗಿ ಸಾಗುತ್ತಿಲ್ಲ. ಬೆಡ್ ರೂಮ್‌ನಲ್ಲಿ ಬೇರೆ ಬೇರೆ ಮಲಗುತ್ತಾರೆ. ಬೆಡ್ ರೂಮಿನಲ್ಲಿರುವ ಡ್ರೆಸ್ಸಿಂಗ್ ಟೇಬಲ್ ಕನ್ನಡಿ ಒಡೆದು ಹೋದಂತೆ ಇದೆ. ಸಾಮಾನ್ಯವಾಗಿ ಒಡೆದ ಕನ್ನಡಿ ಮನೆಯಲ್ಲಿ ಇರಬಾರದು ಎಂದು ಹಿರಿಯರು ಹೇಳುವ ಮಾತಿಗೆ ಪುಷ್ಟೀಕರಿಸಿದಂತಿದೆ.

—ಅನುರಾಧ ಟಿ.

## ವಾರದ ಪತ್ರ

## ರಿಯಾಲಿಟಿ ಶೋಗಳ ರಿಯಾಲಿಟೀಸ್

ಇತ್ತೀಚೆಗೆ ರಿಯಾಲಿಟಿ ಶೋಗಳು ಅಪಾರ ಸದ್ದುಮಾಡುತ್ತಿವೆ. ಅದರಲ್ಲೂ ಸಂಗೀತ ಪ್ರಧಾನ ಶೋಗಳಂತೂ ಜನಪ್ರಿಯವಾಗುತ್ತಿವೆ. ಆದರೆ ಅವುಗಳಲ್ಲಿನ ಅಸಂಬದ್ಧ ನಡವಳಿಕೆಗಳು ಮುಜುಗರಪಡಿಸುತ್ತಿವೆ. ಸರಿಗಮಪ ಶೋನ ನಿರೂಪಕಿ ಹಾಗೂ ಸಂಗೀತ ನಿರ್ದೇಶಕರ ಅಸಭ್ಯ ಸಂಭಾಷಣೆಗಳು 'ಜಾಣರಪೆಟ್ಟಿಗೆ'ಯಲ್ಲಿ ಅನೇಕ ಬಾರಿ ಚರ್ಚೆಗೆ ಗ್ರಾಸವಾಗಿವೆ. ಅದಕ್ಕೆ ಈಗ ಹೊಸದೊಂದು ವಿಷಯ ಸೇರ್ಪಡೆಯಾಗಿದೆ.

ಕೆಲವು ದಿನಗಳ ಹಿಂದೆ ಫ್ಯಾಮಿಲಿ ರೌಂಡ್ ನಡೆಯಿತು. ಅದರಲ್ಲಿ ಮನೆಯ ಸದಸ್ಯರ ಜೊತೆ ಸ್ಪರ್ಧಿಗಳು ಹಾಡಬೇಕಾಗುತ್ತದೆ. ಒಂದು ಹುಡುಗಿಯ ಜೊತೆ ಅವಳ ತಂದೆ ಸಹ ಗಾಯಕರಾಗಿ ಭಾಗವಹಿಸಿದ್ದರು.

ಆ ದಿನ ಅವರು ಹಾಡಬೇಕಾದ ಹಾಡಿನ ಬಗ್ಗೆ ಎಚ್ಚರ ಇರಬೇಕಾಗಿತ್ತು ಎಂದು ನಮಗೆ ಅನಿಸಿತ್ತು. ಏಕೆಂದರೆ ಅವರಿಬ್ಬರೂ ಹಾಡಿದ್ದು ಒಂದು ಪ್ರೇಮಗೀತೆ. ಅದು ಅವರದೇ ಆಯ್ಕೆಯೋ ಅಥವಾ ಟೀವಿ ಆಯ್ಕೆಯೋ ಗೊತ್ತಿಲ್ಲ. 'ಮೈಸೂರು ವೀಳ್ಯದೆಲೆ, ಮಲೆನಾಡ ಅಡಕೆ, ನಾಲಗೆ ಕೆಂಪಾಗಲು ಸುಣ್ಣವು ಬೇಕು. ನಾನು ಕೆಂಪಾಗಲು ನೀನಿರಬೇಕು. ಪೋರ ನೀನು, ಪೋರಿ ನಾನು' ಎಂಬ ಹಾಡನ್ನು ಹಾಡಿದರು. 'ಈ ಹಾಡನ್ನು ಹಾಡುವಾಗ ನಿಮ್ಮ ಮನಸ್ಸಿನಲ್ಲಿ ಏನಿತ್ತು' ಎಂಬ ತೀರ್ಪುಗಾರರ ಪ್ರಶ್ನೆಗೆ 'ಮಗಳ ಹಾಡಿಗೆ ಸಹಕಾರ ಕೊಡುವುದಷ್ಟೇ ನನ್ನ ಉದ್ದೇಶವಾಗಿತ್ತು'. ಎಂಬ ಹಾರಿಕೆಯ ಉತ್ತರ ಕೊಟ್ಟರು. ಈ ಹಾಡನ್ನು ಕೇಳುವಾಗ ಯಾರಿಗೆ ಆಗಲಿ ಮನಸ್ಸಿಗೆ ಮುಜುಗರವಾಗುವುದಂತೂ ಖಂಡಿತ.

—ಪುಷ್ಪ ಎನ್.ಕೆ. ರಾವ್ ಉಡುಪಿ

## ಜೀವನಾನುಭವದ ಜ್ಞಾನ ಮುಖ್ಯ

ಕಲರ್ಸ್‌ನ 'ಕೋಟ್ಯಧಿಪತಿ' ಸ್ಪರ್ಧೆಗಳಲ್ಲಿ ವಿದ್ಯಾವಂತರು, ಅವಿದ್ಯಾವಂತರೂ ಭಾಗವಹಿಸುತ್ತಿದ್ದಾರೆ. ಹೆಚ್ಚು ಮೊತ್ತದ ಬಹುಮಾನ ಗೆಲ್ಲುವವರೆಲ್ಲ ಶಿಕ್ಷಿತರೇ ಎಂದು ಹೇಳಲು ಆಗದು. ವಿಪರೀತ ಓದುವ ಹವ್ಯಾಸವಿರುವ, ಸಾಫ್ಟ್‌ವೇರ್ ಸಂಸ್ಥೆಯಲ್ಲಿ ನೌಕರಿ ಮಾಡುತ್ತಿರುವ ಯುವತಿ ಒಬ್ಬರು ಮೂರು ಬಾರಿ ಐಎಎಸ್ ಪರೀಕ್ಷೆ ತೆಗೆದುಕೊಂಡಿದ್ದಾರೆ. ಚಿನ್ನದ ಪದಕದೊಂದಿಗೆ ಪದವಿ ಪಡೆದವರೂ 'ಕನ್ನಡದ ಕೋಟ್ಯಧಿಪತಿ'ಯಲ್ಲಿ ಗಳಿಸಿದ್ದು ಕೇವಲ 10 ಸಾವಿರ ರೂಪಾಯಿ.

ಅದೇ ಸ್ಪರ್ಧೆಯಲ್ಲಿ ಮೈಸೂರಿನಲ್ಲಿ ಬೀದಿಯಲ್ಲಿ ಚಿತ್ರಾನ್ನ, ಬೋಂಡ, ಬಜ್ಜಿ ಮಾರಾಟ ಮಾಡುವ ಯುವಕ ದೊಡ್ಡ ಮೊತ್ತ ಗಳಿಸಿದ್ದ. ಅಂದರೆ ಬಹುಮಾನ ಗಳಿಕೆಯಲ್ಲಿ ಪುಸ್ತಕ ಜ್ಞಾನಕ್ಕಿಂತ ಮಿಗಿಲಾಗಿ ಸಾಮಾನ್ಯ ಜ್ಞಾನ, ಜೀವನಾನುಭವ ಅತೀ ಮುಖ್ಯ ಎಂದೇ ಅನ್ನಿಸುತ್ತದೆ.

ದಿನಪತ್ರಿಕೆಗಳೇ ಸಾಕಷ್ಟು ಮಾಹಿತಿ ನೀಡುವ ಮಾಧ್ಯಮಗಳಾಗಿವೆ ಎಂಬುದು 'ಕನ್ನಡದ ಕೋಟ್ಯಧಿಪತಿ' ಸಾಬೀತುಪಡಿಸಿದೆ ಎಂದರೆ ತಪ್ಪಾಗದು. ಈ ಹಿನ್ನೆಲೆಯೇ ಬಹುಶ 'ಪುಸ್ತಕದ ಬದನೇಕಾಯಿ' ಎಂಬ ಗುಣವಾಚಕಕ್ಕೆ ನಾಂದಿಯಾಗಿರಬಹುದು?

—ರಾಜೀವ್ ಎನ್. ಮಾಗಲ್ ಸಕಲೇಶಪುರ

## ಅಧೀರರನ್ನಾಗಿಸಬೇಡಿ

ಕಲರ್ಸ್‌ನ 'ಕನ್ನಡದ ಕೋಟ್ಯಧಿಪತಿ'ಯನ್ನು ಪುನೀತ್ ರಾಜಕುಮಾರ್ ಅಚ್ಚುಕಟ್ಟಾಗಿ ನಡೆಸಿಕೊಡುತ್ತಾರೆ. ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ಪ್ರಶ್ನೆಗಳನ್ನು ಕೇಳಿ ಉತ್ತರಕ್ಕಾಗಿ ಸಮಯ ನೀಡುತ್ತಾರೆ, ಸ್ಪರ್ಧಾಳು ಸರಿಯಾದ ಉತ್ತರ ನೀಡಿದ್ದರೂ, ತಕ್ಷಣವೇ ಉತ್ತರ ಸರಿ– ತಪ್ಪು ತಿಳಿಸದೆ ಪದೇ ಪದೇ ಆಟ ಕ್ವಿಟ್ ಮಾಡುತ್ತೀರಾ? ಗೆದ್ದರೆ ಇಷ್ಟು ಹಣ, ಸೋತರೆ ಇಷ್ಟೇ ಹಣ, ಅಂತಾ ಹೇಳಿ ಹೇಳಿ ಕಿರಿ ಕಿರಿ ಹುಟ್ಟಿಸುತ್ತಾರೆ. ಸ್ಪರ್ಧಾಳು ಅಧೀರರಾಗುವಂತೆ ಅದು ಮಾಡುತ್ತದೆ. ಉತ್ತರ ಸರಿ ಇದ್ದರೆ ಮುಂದಿನ ಪ್ರಶ್ನೆಗೆ ಹೋದಾಗ ತನ್ನಿಂದ ತಾನೆ ಧೈರ್ಯ ಬಂದು ಆಟ ಮುಂದುವರೆಸಲು ಸಹಾಯವಾಗುತ್ತದೆ.

—ಭೀಮಣ್ಣ. ಸುಣಗಾರ ದಾವಣಗೆರೆ

## ದೃಶ್ಯ ವೈಭವ

ವಾರಾಂತ್ಯದಲ್ಲಿ ಝೀ ಕನ್ನಡದಲ್ಲಿ ಪ್ರಸಾರವಾಗುವ 'ಉಘೇ ಉಘೇ ಮಾದೇಶ್ವರ' ಉತ್ತಮ ನಿರ್ದೇಶನ, ಸೊಗಸಾದ ಕಲಾ ನಿರ್ದೇಶನದಿಂದ ಮೂಡಿಬರುತ್ತದೆ. ಅರಣ್ಯದ ಮನೋಹರ ದೃಶ್ಯ ವೈಭವ (ಗ್ರಾಫಿಕ್ಸ್) ಕಣ್ಣಿಗೆ ಹಬ್ಬದೂಟವನ್ನು ಬಡಿಸಿದಂತೆ ಗೋಚರಿಸುತ್ತದೆ. ಪಾತ್ರಧಾರಿಗಳ ಮನೋಜ್ಞ ಅಭಿನಯದಿಂದ ಗಮನಸೆಳೆಯುತ್ತಿದೆ.

—ಮಂಜುಳಾ ಎನ್.ಡಿ. ಬೆಂಗಳೂರು

## ಸಂಗೀತ ಧಾರೆ

'ಚಂದನ' ಮನರಂಜನೆಯ ಜೊತೆಗೆ ಸಂಗೀತ– ಸಂಸ್ಕೃತಿಯನ್ನು ಪರಿಚಯಿಸುವ ನಿಟ್ಟಿನಲ್ಲಿ ಶನಿವಾರ ಮಧ್ಯಾಹ್ನ 1.30ಕ್ಕೆ ಪ್ರಸಾರವಾಗುತ್ತಿರುವ 'ಸ್ವರಧಾರೆ' ಸಾಕ್ಷಿ. ಅದು ದಿನದಿಂದ ದಿನಕ್ಕೆ ಜನಪ್ರಿಯತೆಯನ್ನು ಪಡೆಯುತ್ತಿದೆ. ಡಾ. ನಾಗರಾಜ ಹವಾಲ್ದಾರ, ಸಂಗೀತಗಾರರು ಪ್ರಸ್ತುತಪಡಿಸುವ ಈ ಕಾರ್ಯಕ್ರಮದಲ್ಲಿ, ಕನ್ನಡ ನಾಡಿನ ವಿವಿಧ ಸಂಗೀತ ಗಾಯಕರನ್ನು ಮತ್ತು ವಾದ್ಯಗಾರರನ್ನು ಪ್ರೇಕ್ಷಕರಿಗೆ ಪರಿಚಯಿಸುವ ಸುಂದರ ಸಂಗೀತಮಯ ಕಾರ್ಯಕ್ರಮವಾಗಿದೆ. ಹಿಂದೂಸ್ತಾನಿ ಸಂಗೀತದ ವಿವಿಧ ರಾಗಗಳನ್ನು ಗಾಯಕರಿಂದ ಹಾಡಿಸುವ ಮೂಲಕ ಸಂಗೀತ ಪ್ರಿಯರಿಗೆ ಸಂಗೀತ ರಸದೌತಣವನ್ನು ಬಡಿಸುತ್ತಿದ್ದಾರೆ. ಮೊನ್ನೆ ನಾಕೋಡ ಕುಟುಂಬದ ಸಂಗೀತಗಾರರ ಪರಿಚಯ ಮಾಡಿಸಿದರು. ಪಂಡಿತ ಅರ್ಜುನಸಾ ನಾಕೋಡ ಇವರ ಸಂಗೀತ ಸೇವೆಯನ್ನು ಪರಿಚಯಿಸುವುದರ ಜೊತೆಗೆ ಅವರು ಹಿಂದೂಸ್ತಾನಿ ಸಂಗೀತ ಲೋಕಕ್ಕೆ ನೀಡಿದ ಅಪಾರ ಸೇವೆಯನ್ನು ಮತ್ತು ಅವರ ಮನೆತನದಲ್ಲಿ ಈಗಲೂ ಪ್ರಸಿದ್ಧರಾಗಿರುವ ಸಂಗೀತಗಾರರು, ತಬಲಾ ವಾದಕರನ್ನು ಪರಿಚಯಿಸಲಾಯಿತು. ರೇಣುಕಾ ನಾಕೋಡ, ರಘುನಾಥ ನಾಕೋಡ ಅವರ ಸೇವೆಯನ್ನು ಸ್ಮರಿಸಲಾಯಿತು. ಇನ್ನೊಂದು ಕಾರ್ಯಕ್ರಮದಲ್ಲಿ ರುದ್ರವೀಣೆ ಪರಿಚಯಿಸಲಾಯಿತು. ಸಂಗೀತ ಸಂಸ್ಕೃತಿಯನ್ನು ಬಿಂಬಿಸುವ ಸುಂದರ ಕಾರ್ಯಕ್ರಮ ಇದಾಗಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ